## ಅಂಗೈಯಲ್ಲಿ ಅರಮನೆ

### ಮೆಹಂದಿ ಆಗೋಯ್ತು!

ಸಿಡ್ನಿಯಿಂದ ನಮ್ಮಣ್ಣನ ಮೊಮ್ಮಗಳು ಐದು ವರ್ಷದ ಅಂಜಲಿ, ತನ್ನ ಅಪ್ಪ–ಅಮ್ಮನೊಂದಿಗೆ ನಮ್ಮ ಮನೆಯ ಮದುವೆ ಸಮಾರಂಭಕ್ಕೆ ಬಂದಿದ್ದಳು. ಕನ್ನಡದಲ್ಲೇ ಚುರುಕಾಗಿ ಮಾತನಾಡುತ್ತಿದ್ದಳು.

ನನ್ನ ಗೆಳತಿಯೊಬ್ಬಳು ನನ್ನ ಬಳಿ 'ಮೆಹಂದಿ ಕಾರ್ಯಕ್ರಮ ಯಾವಾಗ?' ಎಂದು ಕೇಳಿದಾಗ, ಅಲ್ಲೇ ಇದ್ದ ಅಂಜಲಿ 'ನಮ್ಮ ಅಮ್ಮನ ಮೆಹಂದಿ ಇವತ್ತು ಆಗೋಯ್ತು' ಎಂದಳು. ಎಲ್ಲರೂ ಆಶ್ಚರ್ಯದಿಂದ ನೋಡಲು 'ನಮ್ಮಮ್ಮ ಇವತ್ತು ತಲೆಗೆ ಮೆಹಂದಿ ಹಚ್ಚಿಕೊಂಡು ಸ್ನಾನ ಮಾಡಿದ್ದಾಯ್ತು!' ಎಂದಾಗ, ಅಲ್ಲಿದ್ದವರೆಲ್ಲ ನಕ್ಕರು.

**ಎನ್.ಪಿ. ಶೈಲಜ, ತಿಪಟೂರು**



### ಗುಂಡನ ಉಳಿತಾಯ ಯೋಜನೆ

'ಮಕ್ಕಳೇ ನಿಮಗೆಲ್ಲ ಉಳಿತಾಯ ಯೋಜನೆ ಬಗ್ಗೆ ತಿಳಿಸಿದ್ದೆ. ಅಮ್ಮ, ಅಪ್ಪನಿಗೆ ತೊಂದರೆಯಾಗದಂತೆ ಕಾಸುಕಾಸು ಕೂಡಿಡಬೇಕೆಂದು; ಅದು ಮುಂದೆ ನಿಮಗೇ ಉಪಯೋಗವಾಗುವುದೆಂದು ತಿಳಿಸಿದ್ದೆ. ಯಾರೆಲ್ಲಾ ಅದನ್ನು ಅನುಸರಿಸುತ್ತಿದ್ದೀರಿ?' ಎಂದು ಮೇಡಂ ಕೇಳಿದರು.



'ಹೌದು ಮೇಡಂ. ನಾವು, ನೀವು ಹೇಳಿದ ಹಾಗೆ ಅನುಸರಿಸುತ್ತಿದ್ದೇವೆ' ಅಂದ್ರು ಮಕ್ಕಳು. ಆದ್ರೆ ಸೈಲೆಂಟಾಗಿದ್ದ ಗುಂಡನನ್ನು 'ನೀನೇನಂತಿ ದಡ್ಡ ಗುಂಡಾ? ನಿನಗೆ ಸ್ವಲ್ಪಾನೂ ಬುದ್ಧಿಯಿಲ್ಲ. ಎಲ್ಲದ್ರಲ್ಲೂ ಫೇಲ್ ಆಗ್ತಾ ಇರ್ತೀಯಾ? ಏನಾದ್ರೂ ಉಳಿತಾಯ ಮಾಡ್ಬೇಕು ಅಂತ ಅಂದ್ಕೊಂಡಿದೀಯಾ ಹೇಗೆ?' ಎಂದು ಮೇಡಂ ಕೇಳಿದರು.

'ಇಲ್ಲ, ಮೇಡಂ ಈಗ್ಲೇ ನನ್ನ ತಲೇಲಿರೊ ಬುದ್ಧಿ ಖರ್ಚು ಮಾಡ್ಬಿಟ್ರೆ ಮುಂದೆ ಮುದುಕ ಆದಾಗ ಏನು ಗತಿ? ಅದಕ್ಕೇ ಸ್ವಲ್ಪ ಸ್ವಲ್ಪಾನೇ ಬುದ್ಧಿ ಖರ್ಚು ಮಾಡ್ತೀನಿ' ಅಂದಾಗ, ಮೇಡಂ 'ವಾಹ್... ಗುಂಡಾ ಮೆಚ್ಚಿದೆ ನಿನ್ನ ಬುದ್ಧಿವಂತಿಕೆ' ಅಂದ್ರು. ಜೊತೆಗೆ ಮಕ್ಕಳೆಲ್ಲಾ ನಗುವಿನಲ್ಲಿ ಮುಳುಗಿದ್ರು.

**ಸುಮನಾ, ಬೆಂಗಳೂರು**